ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.

ದಿನಾಂಕ: 10.05.2017

# : :ಪತ್ರಿಕಾ ಪ್ರಕಟಣೆ: :

2017-18 ನೇ ಸಾಲಿನ ಶಿಕ್ಷಣ ಹಕ್ಕು ಕಾಯಿದೆಯಡಿ ಅಲ್ಪಸಂಖ್ಯಾತವಲ್ಲದ ಅನುದಾನರಹಿತ ಶಾಲೆಗಳಲ್ಲಿ ಪ್ರವೇಶಕ್ಕಾಗಿ ದಿನಾಂಕ: 28.04.2017 ರಂದು ನಡೆದ ಮೊದಲನೇ ಸುತ್ತಿನ ಆನ್‌ಲೈನ್ ಲಾಟರಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಮಕ್ಕಳ ದಾಖಲಾತಿಗಾಗಿ ಗಡುವನ್ನು ದಿನಾಂಕ: 10.05.2017 ಎಂದು ನಿಗಧಿಗೊಳಿಸಲಾಗಿತ್ತು. ದಾಖಲಾತಿ ಗಡುವನ್ನು ವಿಸ್ತರಿಸಲು ಜನಪ್ರತಿನಿಧಿಗಳು, ಪೋಷಕರು ಮತ್ತು ಹಲವು ಸಂಘಸಂಸ್ಥೆಗಳು ಮನವಿ ಮಾಡಿರುತ್ತಾರೆ. ಆದುದರಿಂದ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮೊದಲನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಮಕ್ಕಳ ದಾಖಲಾತಿ ಗಡುವನ್ನು ದಿನಾಂಕ:10.05.2017 ರಿಂದ 12.05.2017 ರವರೆಗೆ ವಿಸ್ತರಿಸಿದೆ.

ಎರಡನೇ ಸುತ್ತಿನ ಸೀಟು ಹಂಚಿಕೆಗಾಗಿ ಹೊಸದಾಗಿ ಅರ್ಜಿ ಸಲ್ಲಿಸುವ ಹಾಗೂ ಮಾರ್ಪಡಿಸುವ ದಿನಾಂಕವನ್ನೂ ಸಹ 09.05.2017 ರಿಂದ 12.05.2017 ರವರೆಗೆ ವಿಸ್ತರಿಸಿದೆ.

ಈ ಮೇಲಿನ ಸೌಲಭ್ಯವನ್ನು ಸಂಬಂಧಿಸಿದ ಪೋಷಕರು ಸದುಪಯೋಗಪಡಿಸಿಕೊಳ್ಳಲು ಈ ಮೂಲಕ ಕೋರಿದೆ.

ಸಹಿ/-
(ಸೌಜನ್ಯ ಭಾ.ಆ.ಸೇ)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

[ಮಾನ್ಯ ಆಯುಕ್ತರ ನಿರ್ದೇಶನ]

ನಿರ್ದೇಶಕರು(ಪ್ರಭಾರ)
ಪ್ರಾಥಮಿಕ ಶಿಕ್ಷಣ